# ಪದ್ಯಪಾಠ – 14 ಜಾಣ ಆಮೆ

## ಅಭ್ಯಾಸ

(ಅ) ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಕೊಳದಲ್ಲಿನ ಆಮೆಗೆ ಯಾವ ಆಸೆ ಮೂಡಿತು?

ಉ: ಕೊಳದಲ್ಲಿನ ಆಮೆಗೆ ಬಾವಿನಲ್ಲಿ ಹಕ್ಕಿಯಂತೆ ಹಾರಾಡಬೇಕೆಂಬ ಆಸೆ ಮೂಡಿತು.

2. ಆಮೆ ಹಂಸಗಳ ಸಂಗವನ್ನು ಏಕೆ ಬೆಳೆಸಿತು?

ಉ: ಹಂಸಗಳಿಗೆ ಬಾವಿನಲ್ಲಿ ಹಾರಲು ಸಾಧ್ಯವಾಗದಿರುವು-ದರಿಂದ ಅದರ ಸಂಗ ಮಾಡಿದರೆ ತನ್ನ ಆಸೆ ತೀರಿಸಿಕೊಳ್ಳಲು ಆಮೆ ಹಂಸಗಳ ಸಂಗ ಬೆಳೆಸಿತು.

3. ಬಾನಿನಲ್ಲಿ ಸಾಗಿದ ಆಮೆಗೆ ಏಕೆ ಸಿಟ್ಟು ಬಂತು?

ಉ: ಎರಡು ಹಂಸಗಳು ಕೋಲನ್ನು ಹಿಡಿದು, ಅದರ ಮಧ್ಯೆ ಆಮೆಯು ಕೋಲನ್ನು ಬಾಯಲ್ಲಿ ಹಿಡಿದುಕೊಂಡಿತ್ತು. ಪಡ್ಡೆ ಹುಡುಗರು ಆಮೆ ಹಾರುತ್ತಿರುವುದನ್ನು ಕಂಡು ಕಲ್ಲು ಹಾರುತ್ತಿದೆ ಎಂದು ಕಿರುಚಿಕೊಂಡರು ಆಮೆಗೆ ಸಿಟ್ಟು ಬಂತು.

4. ಆಮೆ ಪಡ್ಡೆ ಹುಡುಗರಿಗೆ ಏನೆಂದು ಬೈದಿತು?

ಉ: ಆಮೆ ಸಿಟ್ಟುಗೊಂಡು, ಕೋಲನ್ನು ಕೈಯಲ್ಲಿ ಹಿಡಿದು ಪಡ್ಡೆ ಹುಡುಗರನ್ನು ತನ್ನ ಮೇಲೆ ಹೊಟ್ಟೆಕಿಚ್ಚೆಂದು ಬಿಡುವಿರಿ ಎಂದು ಬೈದು ಮತ್ತೆ ಕೋಲನ್ನು ಬಾಯಿಯಲ್ಲಿ ಹಿಡಿದು, ಹುಡುಗರಿಗೆ ಟಾಟಾ ಹೇಳಿತು.

ಆ) ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಹಂಸಗಳು ಆಮೆಯನ್ನು ಬಾನಲ್ಲಿ ಒಯ್ಯಲು ಮಾಡಿದ ಉಪಾಯವೇನು?

ಉ. ಹಂಸಗಳು ಒಂದು ಗಟ್ಟಿಯಾದ ಕೋಲನ್ನು ತಂದು ಆ ಕೋಲಿನ ಮಧ್ಯೆ ಆಮೆಯು ಗಟ್ಟಿಯಾಗಿ ಬಾಯಲ್ಲಿ ಕಚ್ಚಿ ಹಿಡಿಯಲು ಹೇಳಿದವು ಕೋಲಿನ ಆಚೆ ಈಚೆ ಹಂಸಗಳೆರಡು ಕೊಕ್ಕಿನಲ್ಲಿ ಕಚ್ಚಿ ಬಾನಲ್ಲಿ ಒಯ್ಯಲು ಉಪಾಯ ಮಾಡಿದವು.

2. ಬಾನಿನಲ್ಲಿ ಸಾಗಿದ ಆಮೆಗೆ ಯಾವ ಅನುಭವಗಳಾದವು?

ಉ: ಬಾನಿನಲ್ಲಿ ಸಾಗಿದ ಆಮೆಗೆ ತಂಪುಗಾಳಿ ಮೋಡ ಎಲ್ಲವನ್ನೂ ಕಂಡು ಹರುಷಗೊಂಡಿತು. ಸೂರ್ಯನನ್ನು ಹತ್ತಿರದಿಂದ ನೋಡುತ್ತಿರುವಂತಿತು. ಬಾನಿನಿಂದ ಬಯಲು ಸ್ವಚ್ಛವಾಗಿ ಕಾಣುತ್ತಿತ್ತು.

3. ಆಮೆಯು ಪಡ್ಡೆ ಹುಡುಗರನ್ನು ಹೇಗೆ ಬೆಪ್ಪು ಮಾಡಿತು?

ಉ: ಆಮೆ ಹಂಸಗಳು ಹಿಡಿದ ಕೋಲಿನ ಮಧ್ಯೆ ಬಾಯಿಂದ ಕಚ್ಚಿಕೊಂಡು ಬಾನಿನಲ್ಲಿ ಹಾರುತ್ತಿರುವರನ್ನು ಪಡ್ಡೆ ಹುಡುಗರು ಕಂಡು ಗೇಲಿ ಮಾಡಿ, ಕಲ್ಲು ಹಾರುತ್ತಿದೆ ಎಂದು ಕಿರುಚಾಡಿದರು. ಇದರಿಂದ ಆಮೆ ಕೋಪಗೊಂಡು ಕೋಲನ್ನು ಕೈಯಲ್ಲಿ ಹಿಡಿದು ಹುಡುಗರನ್ನು ಬೈದು ಮತ್ತೆ ಬಾಯಲ್ಲಿ ಕೋಲು ಹಿಡಿದು ಹುಡುಗರಿಗೆ ಟಾಟಾ ಹೇಳಿ ಬೆಪ್ಪನಾಗಿ ಮಾಡಿತು.

ಇ) ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ತುಂಬಿರಿ.

1. ಆಮೆಯು <u>ಹಂಸ</u> ಸಂಗ ಬೆಳೆಸಿತು.
2. ಬಾನಿನಲ್ಲಿ ಸಾಗಿದ ಆಮೆಯು ಸನಿಹದಿಂದ <u>ಸೂರ್ಯನನ್ನು</u> ಕಂಡೆನೆಂದಿತು.
3. ಪಡ್ಡೆ ಹುಡುಗರು <u>ಆಮೆ</u> ಬೀಳಬೇಕು ಎಂದಕೊಂಡರು.
4. ಆಮೆಯು ಪಡ್ಡೆ ಹುಡುಗರಿಗೆ ನೀವು <u>ಹೊಟ್ಟೆಕಿಚ್ಚು</u> ಎಂದು ಬಿಡುವಿರಿ ಎಂದಿತು.

## ಭಾಷಾಭ್ಯಾಸ

(ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

1. ಬಾನಲೊಮ್ಮೆ = ಬಾನಲಿ + ಒಮ್ಮೆ
2. ಆಮೆಗೊಂದು = ಆಮೆಗೆ + ಒಂದು
3. ಬಯಕೆಯನ್ನು = ಬಯಕೆ + ಅನ್ನು
4. ಹಂಸವೆರಡು = ಹಂಸ + ಎರಡು
5. ಹಾರಲೆಂದಿತು = ಹಾರಲು + ಎಂದಿತು.

Scanned with CamScanner

(ಆ) ಕೆಳಗೆ ನೀಡಲಾಗಿರುವ ಪದಗಳ ಅರ್ಥ ವ್ಯತ್ಯಾಸ ಬರೆಯಿರಿ.

ಉದಾಹರಣೆ : ಧನ - ದನ (ಧನ - ಹಣ
ದನ - ಹಸು)

1. ಕೊಳ - ಕೋಳ (ಕೊಳ - ಸರೋವರ
ಕೋಳ - ಬೇಡಿ)
2. ಬಾನು - ಭಾನು (ಬಾನು - ಆಕಾಶ
ಭಾನು - ಸೂರ್ಯ)
3. ಹಾರು - ಆರು (ಹಾರು - ಜಿಗಿತ
ಆರು - ತಣ್ಣಗೆ (ಸಂಖ್ಯೆ))
4. ಮಧ್ಯ - ಮದ್ಯ (ಮಧ್ಯ - ನಡುವೆ
ಮದ್ಯ - ಸಾರಾಯಿ) ಹೆಂಡ)
5. ಮತ್ತೆ - ಮೆತ್ತೆ (ಮತ್ತೆ - ನಂತರ
ಮೆತ್ತೆ - ಕೋಮಲವಾದ)
6. ಹಕ್ಕಿ - ಹೆಕ್ಕಿ (ಹಕ್ಕಿ - ಪಕ್ಷಿ
ಹೆಕ್ಕಿ - ಆರಿಸುವುದು)

ಇ. ಕೆಳಗಿನ ಶಬ್ದಗಳ ಹಿಂದೆ ಅಥವಾ ಮುಂದೆ ಒಂದು ಅಕ್ಷರ ಸೇರಿಸಿ ಹೊಸ ಪದ ರಚಿಸಿರಿ.

ಮಾದರಿ : ಪ್ರಸಂಗ (ಪ್ರಸಂಗ)

1. ಆಹಾರ  2. ಗಮನ
3. ಸಾಗರ  4. ಕೊಳವೆ /ಕೊಳಾಯಿ

ಈ. 'ಜಾಣ ಆಮೆ' ಪದ್ಯದಲ್ಲಿನ ಪ್ರಾಸಪದಗಳನ್ನು ಪಟ್ಟಿ ಮಾಡಿ

ಉದಾ : ಮೂಡಿತು - ಬೆಳೆಸಿತು.

1. ಬಂದವು - ತಂದವು , ಎಂದವು
2. ಹಾರತೊಡಗಿತು - ಸಾಗತೊಡಗಿತು
3. ಕಂಡರು - ಕೊಂಡರು
4. ಬೆಪ್ಪಾದರು - ತೆಪ್ಪಗಾದರು
5. ಎಂದಿತು - ಅಂದಿತು

Scanned with CamScanner